G & WC No. 02/2022

ಆರ್.ಡಬ್ಲ್ಯೂ.1

ದಿನಾಂಕಃ 08.11.2023
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟಿ ಸವಾಲು ಅರ್ಜಿದಾರರ ಪರ ವಕೀಲರಿಂದ ಃ

ಅರ್ಜಿದಾರಳಾದ ಶ್ರೀಮತಿ ಹನಮಂತಿ ಇವರು ನನ್ನ ಹೆಂಡತಿಯ ತಾಯಿಯಾಗಿರುತ್ತಾಳೆ. ಮೌನೇಶ, ಸೋಪಣ್ಣ ಮತ್ತು ಮಹಾರಾಜ ಇವರುಗಳು ನನ್ನ ಮಕ್ಕಳಾಗಿರುತ್ತಾರೆ. ಅವರು ಅರ್ಜಿದಾರಳ ಮಗಳ ಮಕ್ಕಳಾಗಿರುತ್ತಾರೆ. ನನ್ನ ಹೆಂಡತಿ 4 ವರ್ಷಗಳ ಹಿಂದೆ ಅಂದರೆ 2018 ರಲ್ಲಿ ಮರಣ ಹೊಂದಿರುತ್ತಾಳೆ. 2018 ರಿಂದ ಇಲ್ಲಿವರೆಗೂ ನನ್ನ ಮೂರು ಮಕಕಳು ಅರ್ಜಿದಾರಳ ಬಳಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯೂ ಸ್ವತಹ ಮುಂದುವರೆದು ಮೂರನೇ ಮಗ ಸೋಪಣ್ಣ ಇತನು ನಮ್ಮ ಬಳಿ ಇರುತ್ತಾನೆ ಮತ್ತು ಆ ಇನ್ನುಳಿದ ಎರಡು ಜನ ಮಕ್ಕಳೂ ಸಹ ಸ್ವಲ್ಪ ದಿನ ನಮ್ಮ ಬಳಿ ಇದ್ದರು ಎಂದು ಹೇಳುತ್ತಾರೆ. ನನ್ನ ಹೆಂಡತಿ ಮರಣ ಹೊಂದಿದ ನಂತರದಿಂದ ಇಲ್ಲಿವರೆಗೆ ನನ್ನ ಮೂರನೇ ಮಗ ನನ್ನ ಬಳಿ ಇರುತ್ತಾನೆ. ಸೋಪಣ್ಣ ಇತನು ನನ್ನ ಬಳಿ ಇರುತ್ತಾನೆ ಎಂದು ಹೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಮಹಾರಾಜ ಇತನು 2009 ರಲ್ಲಿ ಜನಿಸಿರುತ್ತಾನೆ. ಮೌನೇಶ ಇತನು 2013 ರಲ್ಲಿ ಜನಿಸಿರುತ್ತಾನೆ ಹಾಗೂ ಸೋಪಣ್ಣ ಇತನು 2016 ರಲ್ಲಿ ಜನಿಸಿರುತ್ತಾನೆ. ನನ್ನ ಮಗ ಮಹಾರಾಜ ಇತನಿಗೆ ಶಹಾಪೂರಿನ ಗಾಂಧಿ ಚೌಕ ಬಳಿ ಇರುವ ಶಾಲೆಯಲ್ಲಿ ಅಡ್ಮಿಶನ್ ಮಾಡಿಸಿದ್ದೇನೆ. ಸದ್ರಿ ಶಾಲೆಯಲ್ಲಿ ಮಹಾಜರಾ ಇತನು ಓದುತ್ತಿದ್ದಾನೆ ಎಂದು ತೋರಿಸಲು ನಾನು ಸ್ಟಡಿ ಸರ್ಟಿಫೀಕೇಟ್ ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನನ್ನ ಮಗ ಸೋಪಣ್ಣ ಇತನು ಅಂಗನವಾಡಿಯಲ್ಲಿ ಓದುತ್ತಾನೆ. ಇನ್ನೊಬ್ಬ ಮಗ ಮೌನೇಶ ಇತನು ಎರಡನೇ ತರಗತಿಯಲ್ಲಿ ಸರ್ಕಾರಿ ಶಾಲೆಯಲ್ಲಿ ಓದುತ್ತಾನೆ. ಮೌನೇಶ ಮತ್ತು ಸೋಪಣ್ಣ ಇವರುಗಳು ನಾನು ಹೇಳುವ ಶಾಲೆ ಮತ್ತು ಅಂಗನವಾಡಿಯಲ್ಲಿ ಓದುತ್ತಿಲ್ಲ ಎಂದರೆ ಸರಿಯಲ್ಲ. ಅವರು ಯಾವ ಶಾಲೆಯಲ್ಲಿ ಓದುತ್ತಿದ್ದಾರೆ ಎಂದು ನನಗೆ ಮಾಹಿತಿ ಇರದೇ ಇದ್ದರೂ ಸಹ ನಾನು ಅವರು ಸರ್ಕಾರಿ ಶಾಲೆ ಮತ್ತು ಅಂಗನವಾಡಿಯಲ್ಲಿ ಓದುತ್ತಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2018 ರಿಂದ ಇಲ್ಲಿವರೆಗೆ ನನ್ನ ಮಕ್ಕಳ ಜೀವನ ನಿರ್ವಹಣೆಯ ಖರ್ಚನ್ನು ನಾನೆ ಮಾಡಿರುತ್ತೇನೆ. ಈ ಪ್ರಕರಣದಲ್ಲಿ ಅರ್ಜಿದಾರಳು ನನ್ನ ಮೂವರು ಮಕ್ಕಳನ್ನು ಮಾನ್ಯ ನ್ಯಾಯಾಲಯಕ್ಕೆ ಕರೆದುಕೂಂಡು ಬರುತ್ತಿದ್ದರು ಎಂದರೆ ಸರಿ. ನನ್ನ ಮೂವರು ಮಕ್ಕಳ ಜೀವನ ನಿರ್ವಹಣೆ ಖರ್ಚನ್ನು ಅರ್ಜಿದಾರಳೆ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ.

2. ನನ್ನದೊಂದು ಕಿರಾಣಿ ಅಂಗಡಿ ಇರುತ್ತದೆ. ಅದು ಶಹಾಪೂರಿನ ಬಾಪುಗೌಡ ಸರ್ಕಲ್ ಹತ್ತಿರ

ಡಿಗ್ರಿ ಕಾಲೇಜು ಹತ್ತಿರ ಇರುತ್ತದೆ. ಕಿರಾಣಿ ಅಂಗಡಿ ನಡೆಸಲು ಸಂಬಂದಪಟ್ಟ ಮನ್ಸಿಪಾಲಿಟಿಯಿಂದ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ. ಸದ್ರಿ ಅನುಮತಿ ಪತ್ರವನ್ನು ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಸದ್ರಿ ಅಂಗಡಿ ಪೊಟೋ ಈ ಪ್ರರಕಣದಲ್ಲಿ ಹಾಜರುಪಡಿಸಿರುವುದಿಲ್ಲ.

3. ನಾನು ದೈಹಿಕವಾಗಿ ವಿಕಲಚೇತನ ವ್ಯಕ್ತಿಯಾಗಿರುತ್ತೇನೆ ಎಂದರೆ ಸರಿ. ವಿಕಲಚೇತನ ಪ್ರಮಾಣ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಪ್ರತಿ ತಿಂಗಳು ಸರ್ಕಾರದಿಂದ ವಿಕಲಚೇತನ ಮಾಶಾಷಣ ರೂ.1400/- ನ್ನು ಪಡೆದುಕೂಳ್ಳುತ್ತೇನೆ. ನನ್ನ ತಂದೆ ಮರಣ ಹೊಂದಿರುತ್ತಾರೆ. ನನ್ನ ತಾಯಿ ಜೀವಂತ ಇರುತ್ತಾರೆ. ನನ್ನ ತಾಯಿಗೆ ಅಂದಾಜು 60 ವರ್ಷ ವಯಸ್ಸಾಗಿರುತ್ತದೆ. ನನ್ನ ತಾಯಿ ಆದಾರ್ ಕಾರ್ಡ್ ನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನಮಗೆ 2 ಎಕರೆ ಜಮೀನು ಇರುತ್ತದೆ. ಅದರ ಪಹಣಿ ಪತ್ರಿಕೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನಾನು ನನ್ನ ಮಕ್ಕಳ ಪಾಲನೆ ಪೋಷಣೆ ಮಾಡಲು ಆರ್ಥಿಕವಾಗಿ ಮತ್ತು ದೈಹಿಕವಾಗಿ ಅಶಕ್ತ ವ್ಯಕ್ತಿಯಾಗಿರುತ್ತೇನೆ ಎಂದರೆ ಸರಿಯಲ್ಲ.

4. ನಾನು ದಿನಾಲು ಮದ್ಯಪಾನ ಮಾಡುತ್ತೇನೆ ಎಂದು ಅರ್ಜಿದಾರರು ಹೇಳುತ್ತಾರೆ ಎಂದರೆ ಸರಿಯಲ್ಲ. ನನ್ನ ಮಕ್ಕಳನ್ನು ಅವರ ಮುಂದಿನ ಭವಿಷ್ಯಕ್ಕಾಗಿ ಮತ್ತು ಅವರ ಏಳಿಗೆಗಾಗಿ ಅವರನ್ನು ಅರ್ಜಿದಾರಳ ಬಳಿ ಇಡುವುದು ಸೂಕ್ತ ಎಂದರೆ ಸರಿಯಲ್ಲ. ಸದ್ರಿ ಅರ್ಜಿದಾರಳು ನನ್ನ ಮಕ್ಕಳ ಹೆಸರಿನಲ್ಲಿ ರೂ.5,00,000/- ಎಫ್.ಡಿ. ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ಆ ಎಫ್.ಡಿ. ಹಣ ನಾನು ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸದ್ರಿ ಎಫ್.ಡಿ. ಹಣ ನಾನು ಮಾಡಿರುತ್ತೇನೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಎಫ್.ಡಿ. ಹಣವನ್ನು 3 ವರ್ಷ ಅವಧಿಗೆ ಇಡಲಾಗಿದೆ. ಸದ್ರಿ ಎಫ್.ಡಿ. ಹಣವನ್ನು ಮಕ್ಕಳ ಭವಿಷ್ಯಕ್ಕಾಗಿ ಮತ್ತು ಅವರ ಶಿಕ್ಷಣಕ್ಕಾಗಿ ಖರ್ಚು ಮಾಡಲು ಇಡಲಾಗಿದೆ ಎಂದರೆ ಸರಿ. ಸದ್ರಿ ಎಫ್.ಡಿ. ಹಣವನ್ನು ವಾಪಸ್ಸು ಪಡೆಯುವ ಉದ್ದೇಶದಿಂದ ನಾನು ಬ್ಯಾಂಕಿನ ವ್ಯವಸ್ಥಾಪಕರ ಜೊತೆ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಎಫ್.ಡಿ. ಹಣವನ್ನು ಮಕ್ಕಳ ಭವಿಷ್ಯಕ್ಕಾಗಿ ಮತ್ತು ಅವರ ಶಿಕ್ಷಣಕ್ಕಾಗಿ ಖರ್ಚು ಮಾಡಬೇಕಾಗಿರುವುದರಿಂದ ಈಗ ಆ ಹಣಕ್ಕೂ ನನಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.